


ಈ ಮರ ಪ್ರೇಮದ ಅದೆಷ್ಟು ಮಧುರಕ್ಷಣಗಳನ್ನು ಉಸಿರಾಡುತ್ತಿದೆಯೊ?



ತೆರೆದ ಹೃದಯದಂತಹ ಬಾಕ್ಸು ಕಣ್ಣಿಗೆ ತಕ್ಷಣ ಹೊಳೆಯುತ್ತದೆ. ಅದಕ್ಕಿಂತ ಭಿನ್ನವಾದ ನಮ್ಮ ಓದಿನ ದಿನಗಳೂ ನೆನಪಿಗೆ ಬರುತ್ತವೆ. ತಣ್ಣನೆಯ ಮರದ ಗಾಳಿಯ ನಡುವೆ ಬೆಚ್ಚನೆಯ ನೆನಪೊಂದು ಹಾದುನಿಲ್ಲುತ್ತದೆ. ಹಾಗೇ ನಿಂತು ಕತ್ತೆತ್ತಿ ನೋಡಿದರೆ ವಿಶಾಲವಾದ ಅರಳೀಮರ, ಬೇರುಗಳಲ್ಲೇ ಬೆಸೆದ ಅದರ ಬೊಡ್ಡೆ ಕಾಂಡದ ಪೊಟರೆ. ಸುತ್ತಲೂ ವಿಶಾಲ ಜಾಗ, ಮೈಮನಕ್ಕೆ ತಾಗಿನಿಲ್ಲುವ ಬೇರಬಿಳಲು. ಪ್ರೇಮದ ಉಯ್ಯಾಲೆಯಾಡಿ, ನೂರಾರು ಸುಪ್ತಭಾವನೆಗಳ ಹಂಚಿಕೊಂಡಿರುವ ಮಣ್ಣಗುರುತು. ಅಷ್ಟೇ ಅಲ್ಲ, ತಮ್ಮ ಪ್ರೇಮ ಚಿರಾಯು ಆಗಬೇಕಾದರೆ ಆಲದಮರ ಬದುಕಿರುವಷ್ಟು ಕಾಲ ಪರಸ್ಪರ ಅವನ/ಅವಳ ಹೆಸರು ಅಲ್ಲಿ ಉಸಿರಾಡಬೇಕೆಂದು ಮರದ ಟೊಂಗೆ ಟೊಂಗೆಯ ಮೇಲೆ ಕೆತ್ತಿದ ಅವರ ಪ್ರೇಮ ಶಾಸನ!

ಹಲವರು ತಮ್ಮ ಹೆಸರಿನ ಸಂಕೇತಗಳನ್ನಷ್ಟೇ ಬಿಟ್ಟು ಹೋದರೆ, ಇನ್ನೂ ಕೆಲವರು ತಾನು ಪ್ರೀತಿಸುವ ಹುಡುಗಿಯ ಹೆಸರನ್ನು ಹಾಗೂ ತನ್ನ ಹೆಸರನ್ನು ಬರೆದು ಅಲ್ಲಿ ಅಜರಾಮರವಾಗಿ ಕಂಗೊಳಿಸುತ್ತಿರುವರು. ಹೀಗೆ ಕಂಗೊಳಿಸುತ್ತಿರುವವರು ನಿಜ ಜೀವನದಲ್ಲಿಯೂ ಪ್ರೀತಿಸಿ ಮದುವೆಯಾದರೆ, ಮದುವೆಯಾಗಿ ಬಂದು ಇಲ್ಲಿ ತಮ್ಮ ಮಕ್ಕಳಿಗೂ ಈ ಮರದ ನೆನಪ ಹಂಚಿಕೊಂಡರೆ ಅದಕ್ಕಿಂತಲೂ ಪವಿತ್ರವಾದ ಬದುಕ ಸೊಗಸು ಇನ್ನೇನಿದೆ?

ಈ ನೆಲದ ಕನಕ, ಬಡವರ ರಾಗಿಯನ್ನು ತೋರಿ ಅಯೋಧ್ಯೆಯ ಶ್ರೀರಾಮನ ಮೂಲಕ ಪರಮ ವೇದದ ಸಾರವೆಂದು ನುಡಿಯುವಂತೆ ನಿಜ ಜಾಣ್ಮೆ ತೋರಿದ. ನಮ್ಮ ಪ್ರೇಮದ ಕರುಣಾಮಯಿ ಹಂಸಲೇಖರೂ ಪ್ರೀತಿಯನ್ನು ವೇದದ ಸಾರವೆಂದರು. 'ಬಾಳಿನ ಮೂಲವಿಲ್ಲಿ ಕೇಳಬಾರದು' ಎಂದರೆ, ಪರಸ್ಪರರು ಪ್ರೀತಿಸುವಾಗ ಹುಟ್ಟು, ಜಾತಿ, ವರ್ಗ, ಧರ್ಮ, ಅಂತಸ್ತು ಯಾವುದೂ ಕಾಣಲ್ಲ ಮತ್ತು ಕಾಣಬಾರದು. ಅದರಾಚೆ ನಿಲ್ಲಬಲ್ಲ ಅಪ್ಪಟ ಚಿನ್ನದಂತಹ ಒಲವು ತುಂಬಿದ ಬಾಳಿಗೆ ಹಂಬಲಿಸುವ ಹಿರಿತನ ಇಲ್ಲಿದೆ. 'ಜಗಕೆ ಹೆದರಿ ನಾವು ಬದುಕಲಿಕ್ಕೆ ಆಗ್ತದೆಯೇ' ಎಂದು ನಮ್ಮ ಸಾಮಾನ್ಯ ಜನರೇ ಮಾತನಾಡಿಕೊಳ್ಳುತ್ತಾರೆ. ಆದರೂ ನಮ್ಮ ಸಮಾಜ ಅಲ್ಲಲ್ಲಿ ಫ್ಯೂಡಲ್ ತರಹ ಈಗಲೂ ವರ್ತಿಸುತ್ತಿದೆ. ಮರ್ಯಾದೆ ಹತ್ಯೆಗಳ ಹೆಸರಲ್ಲಿ ಎಷ್ಟುಕಾಲ ಪರಸ್ಪರ ಸೆಕ್ಯುಲರ್ ಆಗಿ ಪ್ರೀತಿಸಿದ ಮಗಳು ಸ್ವತಃ ತಂದೆ–ತಾಯಿ, ಬಂಧುಗಳ ಕೈಯಲ್ಲಿ ಹತರಾಗುವುದನ್ನು ಕಂಡಿದ್ದೇವೆ. ಮಗಳ ಪ್ರೀತಿಸಿದ, ಮದುವೆಯಾದ ಅನ್ಯಕೋಮಿನ ಹುಡುಗನನ್ನು ಬರ್ಬರವಾಗಿ ಕೊಲ್ಲುವುದಲ್ಲದೆ, ಮನೆಗೆ ಬೆಂಕಿಹಚ್ಚಿದ್ದನ್ನೂ ಪತ್ರಿಕೆಗಳಲ್ಲಿ ಓದಿ ಸಂಕಟಪಟ್ಟಿದ್ದೇವೆ. ಈಗೀಗಂತೂ ಸೌಹಾರ್ದಕ್ಕಿಂತಲೂ ಧರ್ಮವೇ ಮೇಲುಗೈಯಾಗಿ, ಬದುಕು ಅಂದಗೆಟ್ಟಿರುವುದನ್ನೂ ಕಂಡಿದ್ದೇವೆ.

ಬದುಕಿನ ಅಂದ ಮಾಸುತ್ತಿರುವ ಘಟನೆಗಳೇ ಕಣ್ಣಿಗೆ ರಾಚುತ್ತಿರುವ ಕಾಲದಲ್ಲೂ ಎಲ್ಲೋ ಮರ ಚಿಗುರೊಡೆದಂತೆ, ಹೂಬಿಟ್ಟು ಕಂಪಿಸಿದಂತೆ, ಹಣ್ಣಾಗಿ ತೊಟ್ಟು ಕಳಚಿದಂತೆ, ಗಿಣಿಕೂತು ಸಿಹಿ ಅಗುಳು ಮೆಲ್ಲಿದಂತೆ, ಹಕ್ಕಿ ಹಾಡಿದಂತೆ, ಮರಗಿಡ ತೂಗಿದಂತೆ, ಕಾಂಡ–ಟೊಂಗೆ ಬಲಿತು ಬೆಳೆದಂತೆಲ್ಲ ಈ ಪ್ರೇಮ ಬರಹಗಳು ವಿಸ್ತಾರವಾಗಿ ಕಣ್ದುಂಬಿ ನಿಂತಂತೆ ಇಲ್ಲಿ ಭಾಸವಾಗುತ್ತವೆ. ಇಂತಹ ಸಾರ್ಥಕ್ಯದ ಕ್ಷಣಗಳನ್ನು ನಮ್ಮ ಯುವಮನಸ್ಸು ಇಲ್ಲಿರಿಸಿ ಹೋಗಿರುತ್ತದೆ.

'ಗಿಡಗಂಟೆಗಳಾ ಕೊರಳೊಳಗಿಂದ ಹಕ್ಕಿಗಳಾ ಹಾಡು' ಎಂದು ನಮ್ಮ ಬೇಂದ್ರೆಯವರು, ಧಾರವಾಡ ಪರಿಸರದ ಅತ್ತಿಕೊಳ್ಳದ ಸೂರ್ಯೋದಯವನ್ನು ಕಂಡು 'ಬೆಳಗು' ಪದ್ಯ ಬರೆದರು. ಇದು ಬರೀ ಬೆಳಗಲ್ಲ, ಈ ಬೆಳಗಲ್ಲಿ ಶಾಂತಿರಸವಿದೆ ಎಂದು ಬೆಳಗಿನ ಮೀಮಾಂಸೆ ಬರೆದರು. ನಮ್ಮ ಹುಡುಗರಿಲ್ಲಿ ಧಾರವಾಡ ಕ್ಯಾಂಪಸ್ಸಿನ ಬಟಾನಿಕಲ್ ಗಾರ್ಡನ್ನಿನ ಶಕ್ತಿ ಮತ್ತು ಶುದ್ಧ ಆಮ್ಲಜನಕಯುಕ್ತ ಅರಳೀಮರವನ್ನೇ ಆಯ್ಕೆಮಾಡಿಕೊಂಡು ಮರವೇರಿ ಪ್ರೇಮಬರಹವನ್ನು ಬರೆದರು. ಈಗ ನಾವು 'ಗಿಡಗಂಟೆಗಳಾ ಕೊರಳೊಳಗಿಂದ ಪ್ರೇಮಿಗಳಾ ಹಾಡು' ಎಂದು ಖಂಡಿತ ಹಾಡಿಕೊಳ್ಳಬಹುದೇನೋ?

ಏನೇ ಇರಲಿ, ಹೃದಯ ಸಂಬಂಧದ ಬರಹಗಳು ಶಾಶ್ವತವಾಗಿರಲಿ. ಅದರೊಂದಿಗೆ ನಮ್ಮ ಅರಳೀಮರವೂ ಸಾವಿರಾರು ವರ್ಷಗಳ ಕಾಲ ಬಾಳಿ ನಿಲ್ಲಲಿ.

ಪ್ರತಿಕ್ರಿಯಿಸಿ: feedback@sudha.co.in